ಆಟದ ಮನೆ ನಾಟಕಗಳನ್ನು ಪ್ರದರ್ಶಿಸುವುದಿತ್ತು. ಇವುಗಳ ಜೊತೆಗೇ, ಇವರಿಬ್ಬರನ್ನು ಗಲ್ಲಿಗೇರಿಸುವ ನಾಟಕವನ್ನೂ ಸೇರಿಸಲಾಯಿತು. ಒಂದೇ ಪ್ರದರ್ಶನ– ಬೆಳಿಗ್ಗೆ 5 ಗಂಟೆಗೆ.

ಆ ಶನಿವಾರ, ಈ ನಾಟಕದ ಕೊನೆ ಗಳಿಗೆಯ ಪ್ರದರ್ಶನದ ತಯಾರಿ ಶುರುವಾಯಿತು. ಉದ್ಯಾನವನದ ಉತ್ತರ ಭಾಗದ, ಚೆಸ್ ಮಂದಿರದಿಂದ ಕೆಲವೇ ಮೀಟರ್‌ಗಳ ಅಂತರದಲ್ಲಿ ಮತ್ತು 'ಲಾಟೀನು' ಎಂಬ ಶೀರ್ಷಿಕೆ ಹೊತ್ತ ಒಂದು ದೊಡ್ಡ ಮರದ ಶಿಲ್ಪದಿಂದ ಹತ್ತು ಮೀಟರ್ ದೂರದಲ್ಲಿ ಕಬ್ಬಿಣ ಮತ್ತು ಮರದಿಂದ ತಾತ್ಕಾಲಿಕ ಜಗಲಿಗಳನ್ನು ರಚಿಸಲಾಯಿತು. 'ದರೋಡೆಕೋರರು ಮತ್ತು ಕಳ್ಳರನ್ನು ಸಾರ್ವಜನಿಕವಾಗಿ ನೇಣು ಹಾಕುವ ಜಾಗ' ಎಂಬ ಸಾರುತ್ತಿದ್ದ ದೊಡ್ಡ ಬ್ಯಾನರ್‌ಗಳನ್ನು ಈ ಜಗಲಿಗೆ ಕಟ್ಟಲಾಯಿತು. ಇದರ ಜೊತೆಗೆ, 'ಖೆರಾದ್‌ಮಂದ್ ನೆರೆಹೊರೆಯವರು ಫೆಲೆಸ್ಟಿನ್ 107 ಪೋಲೀಸ್ ಸ್ಟೇಷನ್‌ನ ಕಷ್ಟಪಟ್ಟು ಕೆಲಸ ಮಾಡುವ ಸಿಬ್ಬಂದಿಗೆ ಆಭಾರಿ' ಎನ್ನುವ ಫಲಕವನ್ನೂ ಹಾಕಿತ್ತು. ಆಯತಾಕಾರದ ಸ್ಥಳವನ್ನು ನಾಕಾಬಂದಿಯ ತರಹ ಸುತ್ತುವರಿಯಲಾಯಿತು ಮತ್ತು ಪಾರ್ಕಿನಿಂದ ಎಲ್ಲರೂ ನೋಡಲು ಅನುಕೂಲವಾಗುವಂತೆ ಬೇಶಹರ್ ರಸ್ತೆಯಲ್ಲಿ ಕ್ರೇನ್‌ಗಳನ್ನು ನಿಲ್ಲಿಸಲಾಯಿತು. ಕೆಲವು ನಿಮಿಷಗಳ ನಂತರ ಒಬ್ಬ ಅಧಿಕಾರಿ ಇದ್ದ ಒಂದು ಮರ್ಸಿಡಿಸ್ ಕಾರು ಮತ್ತು ಕೆಲವು ಪೇದೆಗಳಿದ್ದ ಪೊಲೀಸ್ ವ್ಯಾನ್ ಬಂದು ನಿಂತವು. ನೇಣಿನ ಸಮಯ ಸಮೀಪಿಸುತ್ತಿದ್ದಂತೆ, ಅಧಿಕಾರಿಗಳ ಮತ್ತು ಪೊಲೀಸರ ಸಂಖ್ಯೆ ಹೆಚ್ಚಾಯಿತು. ಕಾರುಗಳ ಸಂಖ್ಯೆಯೂ. ಪ್ರೇಕ್ಷಕರು ಬೆಳಗಿನ ನಾಲ್ಕು ಗಂಟೆಗೇ ಬಂದು ಪಾರ್ಕಿನ ಹುಲ್ಲು ಹಾಸಿನ ಮೇಲೆ ಮತ್ತು ಬೆಂಚುಗಳ ಮೇಲೆ ಕೂತಿದ್ದರು. ಹೊತ್ತು ಮೂಡುವ ಕಾಲವಾಗುತ್ತಿದ್ದಂತೆ, ಅವರು ಕಬ್ಬಿಣದ ಹಂದರವನ್ನು ಸಮೀಪಿಸಿದರು ಮತ್ತು ಕೆಲವರು ನೋಡಲು ಅನುಕೂಲವಾಗುವಂತೆ ಮರವೇರಿ ಕುಳಿತರು.

ಅಂದು ಮಧ್ಯರಾತ್ರಿಯ ವೇಳೆಗೆ, ಪಾರ್ಕಿನ ಸುತ್ತ ಬೆಳಕಿರಲಿಲ್ಲವಾದ್ದರಿಂದ ಎರಡು ದೊಡ್ಡ ಸ್ಪಾಟ್ ಲೈಟ್‌ಗಳನ್ನು ತಂದು ಇರಿಸಲಾಯಿತು. ಅವುಗಳ ಗುರಿ ಕಿತ್ತಳೆ ಬಣ್ಣದ ಕ್ರೇನ್‌ಗಳು. ನೇಣು ಹಾಕುವ ಜಾಗ ಮಾತ್ರ ಪ್ರಖರ ಬೆಳಕಿನಿಂದ ಕೂಡಿದ್ದು ಉಳಿದ ಭಾಗ ಅಕ್ಷರಶಃ ಅಂಧಕಾರದಿಂದ ಕೂಡಿತ್ತು. ಇದೆಲ್ಲ ರಂಗಭೂಮಿಯಲ್ಲಿ ಸ್ಪಾಟ್ ಹಾಕಿದ ಹಾಗೆಯೇ. ನೆರೆದಿದ್ದ ಜನ ಅಲಿ ಮತ್ತು ಅಲಿರೆಝಾ ಅವರ ಬರುವಿಕೆಯನ್ನೇ ಕಾಯುತ್ತಿದ್ದರು. ಜನಗಳ ಗುಂಪು, ಈ ಇಬ್ಬರ ಸ್ನೇಹಿತರು, ಬಂಧುಗಳು ಮತ್ತು ಅವರ ನೆರೆಹೊರೆಯವರಿಂದಲೇ (ಮಕ್ಕಳನ್ನೂ ಒಳಗೊಂಡು) ತುಂಬಿತ್ತು. ಶೊಕುಘೇ ಬಡಾವಣೆಯ ಪಿರೌಝಿ ರಸ್ತೆಯಿಂದ ಅವರೆಲ್ಲರೂ ತಂತಮ್ಮ ಮೋಟರ್ ಸೈಕಲ್‌ಗಳಲ್ಲಿ ಬಂದಿದ್ದರು. ಇದು ಒಂದು ತರಹ ಆ ನಗರದ ದಕ್ಷಿಣ ಭಾಗದ ಪರಂಪರೆ. ಯಾವುದೇ ಸಮಾರಂಭವಿದ್ದರೂ, ಮೋಟರ್‌ಸೈಕಲ್‌ಗಳಲ್ಲಿ ಹೋಗಿ ಎಲ್ಲರೂ ಸೇರಿ ಭಾಗವಹಿಸುತ್ತಿದ್ದರು. ಇಬ್ಬರು ಯುವಕರು, ನೇಣನ್ನು ಹತ್ತಿರದಿಂದ ನೋಡುವ ಸಲುವಾಗಿ, ಪಾರ್ಕ್‌ನಲ್ಲಿದ್ದ ಒಂದು ಬೆಂಚನ್ನೇ ಅನಾಮತ್ತಾಗಿ ಎಳೆದು ಅಂಚಿನವರೆಗೂ ತಂದು ಅದರ ಮೇಲೆ ನಿಂತರು.

ಪ್ರೇಕ್ಷಕರಲ್ಲಿ, ಅದೇ ಬಡಾವಣೆಯ ಜನ ತುಂಬ ಕಡಿಮೆ. ಆ ಕೆಲವೇ ಕೆಲವರನ್ನು ಅವರ ಉಡಿಗೆ ತೊಡುಗೆಗಳಿಂದಲೇ, ಅಲಿ ಮತು ಅಲಿರೆಝಾ ಕಡೆಯವರಲ್ಲವೆಂದು ಸುಲಭವಾಗಿ ಹೇಳಬಹುದಿತ್ತು. ಕಳೆದ ವರ್ಷ ಸಾದತಾಬಾದ್ ಬಡಾವಣೆಯ ಕಾಜ್ ಚೌಕ ಮತ್ತು ಶಹೀದ್ ಮಹಾಲತಿ ಬಡಾವಣೆಯ ಹಫ್ತ್ ರಸ್ತೆಯಲ್ಲಿ ನಡೆದ ನೇಣುಗಳಿಗೆ ಬಂದ ಜನಸಂದಣಿಯನ್ನು ಹೋಲಿಸಿದರೆ, ಈ ಹೊನಾರ್‌ಮಂದನ್ ಪಾರ್ಕಿನಲ್ಲಿ ಬಹಳ ಕಡಿಮೆ ಜನ ಬಂದಿದ್ದರು. ಆ ಬಡಾವಣೆಯ ನಿವಾಸಿಗಳು ಈ ಪ್ರದರ್ಶನದ ಬಗ್ಗೆ ಅಷ್ಟೇನೂ ಆಸ್ಥೆ ತೋರಿಸಲಿಲ್ಲ ಮತ್ತು ಪಾರ್ಕಿನ ಮುಂದಿರುವ ಮನೆಗಳಲ್ಲಿ ಕೆಲವೇ ಮನೆಗಳಲ್ಲಿ ದೀಪ ಬೆಳಗಿತ್ತು. ಕೆಲವರು ಮಾತ್ರ ತಮ್ಮ ತಮ್ಮ ಮನೆಗಳ